**ಸಾಕ್ಷಿಯನ್ನು ದಿಃ 13.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನಗೆ ಮದುವೆಯಾಗಿ 24 ವರ್ಷ ಆಯಿತು. 2 ನೇ ಅರ್ಜಿದಾರರ ಗಂಡನ ಹೆಸರು ಗಿರೀಶ್ ಅವರ ಮಗುವಿನ ಹೆಸರು ಧ್ರುವ. ಅವರನ್ನು ಹೆಚ್.ಡಿ.ಕೋಟೆಯ ಹುರ ಎಂಬಲ್ಲಿಗೆ ಮದುವೆ ಮಾಡಿ ಕೊಡಲಾಗಿದೆ. ಸುಸ್ಮಿತನ ಗಂಡನ ಹೆಸರು ಪ್ರದೀಪ್. ಅವರ ಮಗಳು ವೈಷ್ಣವಿ. ಅವರನ್ನು ಗಾಳಿಪುರ ಕ್ಕೆ ಮದುವೆ ಮಾಡಿಕೊಡಲಾಗಿದೆ. ಆ ದಿನ ನನ್ನ ಗಂಡ ಚಲಾಯಿಸುತ್ತಿದ್ದ ಬೈಕ್ ಅವರಿಗೆ ಸೇರಿದ್ದು. ನನ್ನ ಗಂಡನಿಗೆ ಆಧಾರ್ ಕಾರ್ಡ್, ಡಿ.ಎಲ್ ಇದೆ ಅವರ ಬೈಕ್ ಗೆ ಆರ್.ಸಿ. ಇನ್ಸಶೂರೆನ್ಸ್ ಇದೆ. ಮೇಲ್ಕಂಡ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಮೃತರ ವಯಸ್ಸನ್ನು ಅವರ ಆಧಾರ್ ಕಾರ್ಡ್ ಆಧಾರದ ಮೇಲೆ ಹೇಳುತ್ತಿದ್ದೇನೆ. ನನ್ನ ಯಜಮಾನರ ಆಧಾಯದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸಂಬಳವನ್ನು ನಗದಾಗಿ ಕೊಡುತ್ತಿದ್ದರು. ನನ್ನ ಗಂಡ ಆದಾಯ ತೆರಿಗೆ ಪಾವತಿಸುತ್ತಿರಲಿಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ವಿಮಾ ಕಂಪನಿಯವರು ಮನೆಗೆ ಬಂದಾಗ ತೆಗೆದ ಫೋಟೋಗಳು ಎಂದರೆ ಸರಿ. ಮೂಲ ಫೋಟೋಗಳನ್ನು ಹಾಜರು ಪಡಿಸುವ ನಿಬಂಧನೆಯ ಮೇರೆಗೆ ಮೇಲ್ಕಂಡ ದಾಖಲೆಯನ್ನು ನಿಆರ್. 1 ಎಂದು ಗುರುತಿಸುವಿಕೆಗಾಗಿ ಗುರುತಿಸಲಾಯಿತು. ನನ್ನ ಗಂಡನಿಗೆ 49 ರಿಂದ 50 ವರ್ಷ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಹಾಕಿರುವ ನನ್ನ ಗಂಡನ ಫೋಟೋದಲ್ಲೂ ಸಹ ಅವರ ಜನ್ಮ ದಿನಾಂಕ ಹಾಗೂ ಮರಣ ದಿನಾಂಕ ನಮೂದಿದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಪಿ. 11 ರ ಪ್ರಕಾರ 2012 ಕ್ಕೆ ನನ್ನ ಯಜಮಾನರಿಗೆ 38 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ನನ್ನ ಯಜಮಾನರು ಒಬ್ಬನೇ ಮಗ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ನನ್ನ ಮಗಳು ಸಹ ಅಪಘಾತವನ್ನು ಕಂಡಿರುವುದಿಲ್ಲ. ದೂರವಾಣಿ ಆಸ್ಪತ್ರೆಯಿಂದ ನನ್ನ ಮಗಳಿಗೆ ಬಂದಿರುತ್ತದೆ. ಆಸ್ಪತ್ರೆಯವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ದೂರುವಾಣಿ ಸಂಖ್ಯೆ ಬಂದಿದ್ದು ನನ್ನ ಮಗಳು ಮಾತನಾಡಿರುತ್ತಾಳೆ. ನನ್ನ ಯಜಮಾನರಿಗೆ ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಕಿವಿಯಲ್ಲಿ ರಕ್ತಸ್ರಾವ ಆಗಿತ್ತು ಎಂದರೆ ಸರಿ. ಕೆಳಗೆ

ಬಿದ್ದಾಗ ರಸ್ತೆಗೆ ತಲೆ ಬಡಿದು ರಕ್ತಸ್ರಾವ ಆಗಿದೆ ಎಂದರೆ ಸರಿ. ನನ್ನ ಪತಿ ಹೆಲ್ಮೆಟ್ ಧರಿಸಿದ್ದರೆ ಮೇಲ್ಕಂಡ ಗಾಯ ಆಗುತ್ತಿರಲಿಲ್ಲ ಎಂದರೆ ಹೆಲ್ಮೆಟ್ ಧರಿಸಿದ್ದರು ಎನ್ನುತ್ತಾರೆ. ಅಪಘಾತ ನನ್ನ ಯಜಮಾನರ ಅತಿವೇಗದ ಚಾಲನೆಯಿಂದ ರಸ್ತೆ ವಿಭಜಕಕ್ಕೆ ಬಡಿದು ಅಪಘಾತ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

2. ಅಪಘಾತ ನೋಡಿದವರು ನನಗೆ ಪರಿಚರು ಇಲ್ಲವೋ ಗೊತ್ತಿಲ್ಲ. ಅಪಘಾತವನ್ನು ಯಾರು ಕಂಡಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯನ ಊರಿನವರನ್ನು ಸಾಕ್ಷಿದಾರರನ್ನಾಗಿ ಮಾಡಿ ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ಚಾಲಕ ನಾವು ಹೇಳಿದ ಹಾಗೆ ವಾಹನ ಬಾಗಿಲು ತೆರೆದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ವಾಹನ ಅಪಘಾತ ಪಡಿಸದೇ ಇದ್ದರೂ ಸಹ ಪರಿಹಾರಕ್ಕಾಗಿ ಎದುರುದಾರರ ವಾಹನವನ್ನು ಸಿಲುಕಿಸಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.